## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2)(ಪ್ರಸ್ತುತ ಸೇವೆಯಿಂದ ವಜಾ), ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ ಆದೇಶ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ ರವರ ಆದೇಶ ಸಂಖ್ಯೆ: ಜಿಪಂಬ/ಸಿಬ್ಬಂದಿ(4)/ಸಿಸಿಎ/43/2013-14, ದಿನಾಂಕ:19.06.2017.
2. ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2)(ಪ್ರಸ್ತುತ ಸೇವೆಯಿಂದ ವಜಾ), ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ:19.08.2018
3. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ:28.10.2017, 02-05-2018 ಮತ್ತು 17-09-2018.

ಪ್ರಸ್ತಾವನೆ :

ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2)(ಪ್ರಸ್ತುತ ಕಡ್ಡಾಯ ನಿವೃತ್ತಿ), ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಬಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ,-

ಆರೋಪ:

"2012-2013ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿ ಮಂಜೂರಾದ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಾಣ ಮಾಡದೇ ಇದ್ದರೂ ಫಲಾನುಭವಿಗಳಿಗೆ ಚೆಕ್ ನೀಡಿರುವ ಕುರಿತಂತೆ ಗ್ರಾಮ ಪಂಚಾಯತ್ ನೋಡಲ್ ಅಧಿಕಾರಿ, ತಾಲ್ಲೂಕ್ ನೋಡಲ್ ಅಧಿಕಾರಿ(ವಸತಿ) ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡ ತಂಡದವರ ಮೂಲಕ ತಪಾಸಣೆ ನಡೆಸಿದ್ದು, ಒಟ್ಟಾರೆ 27 ಮನೆಗಳನ್ನು ಪರಿಶೀಲಿಸಿದಾಗ ಅದರಲ್ಲಿ 5 ಮನೆಗಳು ಕ್ರಮಬದ್ಧವಾಗಿದ್ದು, ಉಳಿದ 22 ಮನೆಗಳ ಪೈಕಿ ಕೆಲವು ಹಳೆ ಮನೆಗಳಾಗಿದ್ದು, ಬೆಸ್‌ಮೆಂಟ್ ಹಂತದಲ್ಲಿದ್ದರು ಹೆಚ್ಚಿಗೆ ಪಾವತಿ ಮಾಡಿರುವ ಆರೋಪದ ಮೇಲೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಸದರಿ ನೌಕರರನ್ನು ಅಮಾನತ್ತುಗೊಳಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಲು ಉಪಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಬಳ್ಳಾರಿ, ಇವರನ್ನು ವಿಚಾರಣಾಧಿಕಾರಿಗಳಾಗಿ ನೇಮಿಸಲಾಗಿತ್ತು."

ವಿಚಾರಣಾಧಿಕಾರಿಗಳು ಸಲ್ಲಿಸಿದ ದಿನಾಂಕ:30.06.2015ರ ವಿಚಾರಣಾ ವರದಿಯಲ್ಲಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುತ್ತದೆ ಹಾಗೂ ರೂ.8,90,000/-ಗಳ ಹಣ ದುರುಪಯೋಗವಾಗಿದೆ ಎಂದು ವರದಿ ನೀಡಿರುತ್ತಾರೆ. ವಿಚಾರಣಾಧಿಕಾರಿಗಳ ವರದಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸನ್ನು ಆಪಾದಿತ ನೌಕರರಿಗೆ ಜಾರಿ ಮಾಡಲಾಗಿದ್ದು, 1 ವರ್ಷವಾದರೂ ಸದರಿ ನೋಟೀಸಿಗೆ ಆಪಾದಿತ ನೌಕರರು, ಪ್ರತಿರಕ್ಷಣ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆರೋಪಿತ ನೌಕರರು ಗಂಭೀರ ಸ್ವರೂಪದ ಹಣ ದುರುಪಯೋಗ ಎಸಗಿದ್ದು, ಈ ಆರೋಪವನ್ನು ಅಲ್ಲಗಳೆಯಲು ಸಮರ್ಥಿಸುವಂತ ಯಾವುದೇ ದಾಖಲೆಗಳನ್ನಾಗಲಿ ಅಥವಾ ಹೇಳಿಕೆಯನ್ನಾಗಲಿ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿಯನ್ನು ಅಂಗೀಕರಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಯ, ಜಿಲ್ಲಾ ಪಂಚಾಯಿತಿರವರು ಮೇಲೆ ಓದಲಾದ (1)ರ ಆದೇಶದಲ್ಲಿ ಶ್ರೀ ಜವಳಿ ಮಂಜುನಾಥ, ಇವರನ್ನು "ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತಾರೆ.

ಅಲ್ಲದೇ, ಕೆ.ಸಿ.ಎಸ್(ಸಿ.ಸಿ.ಎ)ನಿಯಮಗಳು 1957ರ ನಿಯಮ 8(vii)ರ ಅನ್ವಯ ಸದರಿ ನೌಕರರು ದುರುಪಯೋಗಪಡಿಸಿಕೊಂಡ ಮೊತ್ತ ರೂ.8,90,000/-ಗಳನ್ನು ವಸೂಲಿ ಮಾಡುವಂತೆ ಮತ್ತು ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ಆದೇಶಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದ ವಿರುದ್ಧ ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2) ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:4525/2017ನ್ನು ದಾಖಲಿಸಿದ್ದರು. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:09-08-2017ರ ಆದೇಶದಲ್ಲಿ ಮೇಲ್ಮನವಿ ಪ್ರಾಧಿಕಾರವಾದ ಸರ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತದೆ. ಆದರಂತೆ ಶ್ರೀ ಜವಳಿ ಮಂಜುನಾಥರವರು ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ-

- It is submitted that, the impugned order of dismissal is contrary to the provisions contained in Rule 11(3) to (23) of the Karnataka Civil Services (CCA)Rules, 1957. Hence the same is liable to be set aside.
- It is submitted that, the findings in the enquiry report are perverse. They are based on no substantial evidence. The evidence adduced by the Government Official has not been taken into consideration. No reasons have been assigned or the brushing aside the defence put-forth by the DGO. The Enquiry officer completed the enquiry with the sole intention and bias and bias attitude of inflicting the applicant against the charges, which are based on no evidence. Hence the punishment which is based on the abrupt report is liable to be set-aside.
- That the appellant in response to the 2nd show cause notice replied that, though as stated in the show cause notice the report of the enquiry officer is not enclosed and the appellant requested to the respondent to supply the enquiry report. That the respondent without looking into the reply to the2nd showcause notice and without supplying the report of the enquiry officer passed the impugned order of dismissal. Hence he same is uttar violation of K.C.S(C.C.A)Rules. That the after obtaining the report of the enquiry officer through RTI on 15.07.2017 the appellant is not able to filed any reply to the 2nd show cause notice because the respondent is issued impugned order on 25.05.2017/19.06.2017.
- It is submitted that, the respondent has filed to follow the procedure stipulated under the K.C.S(C.C.A)Rules, 1957. No enquiry report is furnished to the appellant. The applicant has obtained the enquiry report under RTI. The same is supplied after issuance of the impugned order. Hence, the impugned order is liable to be set aside ಎಂದು ಕೋರಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿರವರು ಈ ಮೇಲ್ಮನವಿಯ ಬಗ್ಗೆ ದಿನಾಂಕ:01.11.2017ರಂದು ಸಲ್ಲಿಸಿರುವ ಕಂಡಿಕಾವಾರು ಷರಾದಲ್ಲಿ;-

- ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ.. ಇವರು ಈ ಹಿಂದೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಬಳಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ 2012-13ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿ ಮಂಜೂರಾದ ಫಲಾನುಭವಿಗಳಿಗೆ ಅವರುಗಳು ಮನೆಗಳನ್ನು ನಿರ್ಮಾಣ ಮಾಡಿಕೊಳ್ಳದೇ ಇದ್ದರೂ, ಫಲಾನುಭವಿಗಳಿಗೆ ಒಟ್ಟಾರೆ ರೂ.8,90,000-ಗಳನ್ನು ನಿಯಮಬಾಹಿರವಾಗಿ ಪಾವತಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.
- ಈ ಕುರಿತಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಗರಿಬೊಮ್ಮನಹಳ್ಳಿ ಅವರು ತಾಲ್ಲೂಕು ಪಂಚಾಯಿತಿ ಕಛೇರಿಯ ಗ್ರಾಮ ಪಂಚಾಯತ್ ನೋಡಲ್ ಅಧಿಕಾರಿಗಳನ್ನು ಒಳಗೊಂಡಂತೆ ತಂಡ ರಚಿಸಿ ಅವರಿಂದ ಪರಿಶೀಲನೆ ನಡೆಸಿ ದಿನಾಂಕ: 21.11.2013ರಂದು

- ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿ, ಆರೋಪಿತ ನೌಕರರನ್ನು ದಿನಾಂಕ:08.01.2014ರ ಆದೇಶದ ಮೂಲಕ ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

- ಅಲ್ಲದೇ, ಸದರಿಯವರ ಆರೋಪಗಳ ಹಿನ್ನೆಲೆಯಲ್ಲಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಗಳಿಂದ ದಿನಾಂಕ:12.02.2014 ಮತ್ತು 13.02.2014ರಂದು ವಿಶೇಷ ಲೆಕ್ಕ ತನಿಖೆ ನಡೆಸಲಾಗಿದ್ದು, ದಿನಾಂಕ:24.02.2014ರಂದು ತನಿಖಾ ವರದಿ ಸಲ್ಲಿಸಿರುತ್ತಾರೆ.

- ನಂತರ ಸದರಿ ನೌಕರರಿಗೆ ದೋಷಾರೋಪಣಾ ಪಟ್ಟಿಯನ್ನು ದಿನಾಂಕ:27.10.2014ರಂದು ಜಾರಿಗೊಳಿಸಿದ್ದು, ಆರೋಪಿತ ನೌಕರರು ಸಾಕಷ್ಟು ಸಮಯಾವಕಾಶ ನೀಡಿದ್ದರೂ ಆರೋಪಗಳ ಕುರಿತು ಯಾವುದೇ ಹೇಳಿಕೆ ಸಲ್ಲಿಸಿರುವುದಿಲ್ಲ. ಹೀಗಾಗಿ ದಿನಾಂಕ:20.03.2015ರಂದು ಇಲಾಖಾ ವಿಚಾರಣೆ ನಡೆಸಲು ಉಪಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಬಳ್ಳಾರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಲಾಗಿತ್ತು.

- ವಿಚಾರಣಾಧಿಕಾರಿಗಳು ದಿನಾಂಕ:30.06.2015ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ವಿಚಾರಣಾ ವರದಿಯೊಂದಿಗೆ ಕೆ.ಸಿ.ಎಸ್(ಸಿ.ಸಿ.ಎ)ನಿಯಮ 1957ರ ನಿಯಮ 12(ಎ) ಪ್ರಕಾರ ಆರೋಪಿತ ನೌಕರರಿಗೆ 2ನೇ ಕಾರಣಕೇಳುವ ನೋಟೀಸನ್ನು ದಿನಾಂಕ:08.12.2015ರಂದು ಜಾರಿಗೊಳಿಸಲಾಗಿರುತ್ತದೆ.

- ಮೇಲಿನ ನೋಟೀಸು ಜಾರಿಗೊಳಿಸಿದ ನಂತರ ಆರೋಪಿತ ನೌಕರರು ದಿನಾಂಕ:08.02.2016ರಂದು ಮನವಿಯನ್ನು ಸಲ್ಲಿಸಿ ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಕಾಲಾವಕಾಶ ನೀಡಿದ್ದರೂ, ಅವರು ಸಮಜಾಯಿಷಿ ಸಲ್ಲಿಸದೇ ಇರುವ ಪ್ರಯುಕ್ತ ಮತ್ತೊಂದು ಕಾಲಾವಕಾಶ ನೀಡಿ ದಿನಾಂಕ:22.04.2017ರಂದು ಮತ್ತೊಂದು ನೋಟೀಸನ್ನು ನೀಡಲಾಗಿರುತ್ತದೆ.

- ಆದರೆ ಮೂರನೇ ಬಾರಿ ನೀಡಿದ ನೋಟೀಸಿಗೂ ಸಹ ಆರೋಪಿತರು ಅವರ ವಿರುದ್ಧದ ಆರೋಪಗಳ ಕುರಿತಂತೆ ನಡೆಸಲಾದ ವಿಚಾರಣಾ ವರದಿಯ ಕುರಿತು ಯಾವುದೇ ಲಿಖಿತ ಹೇಳಿಕೆ ನೀಡಿರುವುದಿಲ್ಲ. ಹೀಗಾಗಿ ಅವರಿಗೆ ಅವರ ಆರೋಪಗಳ ಕುರಿತಂತೆ ಹೇಳಿಕೆ ನೀಡಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಅವರ ಆರೋಪಗಳನ್ನು ಅಲ್ಲಗಳೆಯುವಂತಹ ಸಮರ್ಥನೀಯವಾದ ದಾಖಲಾತಿಗಳನ್ನು ಸಲ್ಲಿಸದೇ ಇರುವುದರಿಂದ ಈ ಕುರಿತು ಅವರು ಹೇಳುವುದು ಏನೂ ಇರುವುದಿಲ್ಲವೆಂದು ಪರಿಗಣಿಸಲಾಗಿರುತ್ತದೆ.

- ನಂತರ ಸದರಿಯವರ ವಿರುದ್ಧದ ಆರೋಪಗಳ ಕುರಿತಂತೆ ಇರುವ ದಾಖಲಾತಿಗಳು ಮತ್ತು ವಿಚಾರಣಾ ವರದಿ ಮತ್ತು ವಿಚಾರಣಾ ವರದಿಯ ಜೊತೆಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದಾದ ಸದರಿ ನೌಕರರು ಗಂಭೀರ ಸ್ವರೂಪದ ಹಣ ದುರುಪಯೋಗ ಎಸಗಿರುವುದು ಸಾಬೀತಾಗಿರುತ್ತದೆ.

- ಸದರಿ ಆರೋಪಗಳ ಕುರಿತಂತೆ ವಿಚಾರಣೆಯ ಸಮಯದಲ್ಲಿಯೂ ಅವರು, ಅವರಿಗೆ ನೀಡಿದ ಕಾಲಾವಕಾಶದಲ್ಲಿ ಯಾವುದೇ ಸಮರ್ಥನೀಯವಾದ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲಾಗಿರುತ್ತಾರೆ ಅಲ್ಲದೇ ವಿಚಾರಣಾ ವರದಿ ಜಾರಿಗೊಳಿಸಿ 2ನೇ ನೋಟೀಸು ಮತ್ತು 3ನೇ ನೋಟೀಸು ನೀಡಿದ್ದರೂ ಅವರು ತಮ್ಮ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಲು ವಿಫಲರಾಗಿರುವುದರಿಂದ ಮತ್ತು ಅವರು ಎಸಗಿರುವ ಹಣ ದುರುಪಯೋಗದ ಪ್ರಕರಣವು ಗಂಭೀರ ಸ್ವರೂಪದ್ದಾಗಿರುವುದರಿಂದ ಶಿಸ್ತುಪ್ರಾಧಿಕಾರವು ಸದರಿ ನೌಕರರಿಗೆ ಕೆ.ಸಿ.ಎಸ್(ಸಿ.ಸಿ.ಎ)ನಿಯಮಾವಳಿ 1957ರ ನಿಯಮ 8(vii)ರ ಅಡಿ ಸದರಿಯವರನ್ನು "ಸೇವೆಯಿಂದ ವಜಾಗೊಳಿಸುವ" ದಂಡನೆಯನ್ನು ವಿಧಿಸಿ ಆದೇಶಿಸಿರುವುದು ಮತ್ತು ಸದರಿಯವರು ದುರುಪಯೋಗಪಡಿಸಿಕೊಂಡ ಹಣ ರೂ.8,90,000/-ಗಳನ್ನು ವಸೂಲಿ ಮಾಡುವ ದಂಡನೆ ವಿಧಿಸಿ ಆದೇಶಿಸಿರುವುದು ಸಮರ್ಪಕವಾಗಿದೆ ಎಂದು ನಿವೇದಿಸುತ್ತಾ, ಮೇಲ್ಮನವಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

ಈ ಮೇಲ್ಮನವಿಯ ಬಗ್ಗೆ ದಿನಾಂಕ:03.11.2017, 07.06.2018 ಹಾಗೂ ದಿನಾಂಕ:29.09.2018ರಂದು ರಂದು ವಿಚಾರಣೆ ನಡೆಸಲಾಯಿತು. ಸದರಿ ವಿಚಾರಣೆಗೆ ಶ್ರೀ ಮುಕ್ಕಣ್ಣ ಕರಿಗಾರ್, ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ, ಶ್ರೀ ವಿಶ್ವನಾಥ್, ಕಾರ್ಯನಿರ್ವಾಹಕ ಅಧಿಕಾರಿ(ಪ್ರಭಾರ), ಹಗರಿಬೊಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ, ಶ್ರೀ ರಮೇಶ್ ತಾರಿಕೊಪ್ಪ, ಪ್ರಥಮದರ್ಜೆ ವ್ಯವಸ್ಥಾಪಕರು, ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ, ಅರ್ಜಿದಾರರು ಹಾಗೂ ಅವರ ಪರವಾಗಿ ವಕೀಲರು ಹಾಜರಿದ್ದರು.

ಹಾಜರಿದ್ದ ಎಲ್ಲರ ಹೇಳಿಕೆಯನ್ನು ಪಡೆಯಲಾಯಿತು. ಈ ಮೇಲ್ಮನವಿಯನ್ನು ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957 ನಿಯಮ 25ರಡಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ/ಕಡತಗಳನ್ನು ಪರಿಶೀಲಿಸಲಾಗಿದೆ. ತಮ್ಮ ವಿರುದ್ಧ ಕೆ.ಸಿ.ಎಸ್(ಸಿ.ಸಿ.ಎ)ನಿಯಮಗಳಿಗೆ ವಿರುದ್ಧವಾಗಿ ದಂಡನೆಯನ್ನು ವಿಧಿಸಲಾಗಿದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಆಪಾದಿತ ನೌಕರರು ವಸತಿ ಯೋಜನೆಯಡಿ ರೂ.8,90,000/-ಗಳನ್ನು ದುರುಪಯೋಗಪಡಿಸಿಕೊಂಡಿದ್ದು, ಇದು ಗಂಭೀರ ಸ್ವರೂಪದ ಹಣದುರುಪಯೋಗವಾಗಿರುತ್ತದೆ ಹಾಗೂ ಆಪಾದಿತ ನೌಕರರು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆಯುವಂತಹ ಯಾವುದೇ ಸಮರ್ಥನೀಯ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ನೌಕರರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವಿಧಿಸಿರುವ ದಂಡನಾದೇಶವು ಸಮಂಜಸವಾಗಿರುತ್ತದೆ ಎಂದು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/746/ಗ್ರಾಪಂಕಾ/2017**
**ಬೆಂಗಳೂರು, ದಿನಾಂಕ:21-12-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957ರ ನಿಯಮ 25ರಡಿಯಲ್ಲಿ ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2)(ಪ್ರಸ್ತುತ ಸೇವೆಯಿಂದ ವಜಾ)ರವರು ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಶೀಲಿಸಿದೆ. ಶ್ರೀ ಜವಳಿ ಮಂಜುನಾಥರವರು ವಸತಿ ಯೋಜನೆಯಡಿಯಲ್ಲಿ ರೂ.8,96,000/-ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಸಾಬೀತಾಗಿರುತ್ತದೆ ಹಾಗೂ ಆಪಾದಿತ ನೌಕರರು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆಯುವಂತಹ ಯಾವುದೇ ಸಮರ್ಥನೀಯ ದಾಖಲೆಗಳನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಸದರಿ ನೌಕರರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವಿಧಿಸಿದ್ದ ದಂಡನಾದೇಶ ಸಂಖ್ಯೆ:ಜಿಪಂಬ/ಸಿಬ್ಬಂದಿ(4)/ಸಿಸಿಎ/43/2013-14, ದಿನಾಂಕ:19.06.2017ನ್ನು ಎತ್ತಿಹಿಡಿಯಲಾಯಿತು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿಗಳು:</u>

1) ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
4) ಶ್ರೀ ಜವಳಿ ಮಂಜುನಾಥ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್-2) (ಪ್ರಸ್ತುತ ಸೇವೆಯಿಂದ ವಜಾ), ನಂದಿಹಳ್ಳಿ ಗ್ರಾಮ ಪಂಚಾಯಿತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.